**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 348/2014**

**ಸಾಕ್ಷಿಗೆ ದಿನಾಂಕ 6.11.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಯರಾಜ್ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಪಾಪಯ್ಯ | ಸಿ.ಡಬ್ಲ್ಯೂ-11 |
| ವಯಸ್ಸು | : | 50 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಅಂಕನಾಥಪುರ ಹಾಡಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರ ಪರಿಚಯವಿರುತ್ತದೆ. ನಾನು 2005-06 ಮತ್ತು 2006-07 ನೇ ಸಾಲಿನಲ್ಲಿ ಹೆಚ್.ಡಿ.ಕೋಟೆಯ ಲ್ಯಾಂಪ್ಸ ಸೊಸೈಟಿಯಲ್ಲಿ ನಿರ್ದೇಶಕನಾಗಿ ಕೆಲಸ ಮಾಡಿರುತ್ತೇನೆ. 2005-06 ನೇ ಸಾಲಿನಲ್ಲಿ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯು ಸದರಿ ಸಂಘದ ಕಾರ್ಯದರ್ಶಿಯಾಗಿದ್ದು, 2006-07 ನೇ ಸಾಲಿನಲ್ಲಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯು ಸದರಿ ಸಂಘದ ಕಾರ್ಯದರ್ಶಿಯಾಗಿದ್ದರು. 2005-06 ಮತ್ತು 2006-07 ನೇ ಸಾಲಿನಲ್ಲಿ ನಮ್ಮ ಸಂಘದಲ್ಲಿ ಮರದ ಪಾಚಿ, ಗೊಂದು ಮತ್ತು ಜೇನನ್ನು ಸಂಗ್ರಹಣೆ ಮಾಡಿದ್ದೆವು. 2005-06 ನೇ ಸಾಲಿನಲ್ಲಿ ದಾಸ್ತಾನು ಮಾಡಿದ್ದ ಮರದ ಪಾಚಿ, ಗೊಂದು ಮತ್ತು ಜೇನನ್ನು ಮಾರಾಟ ಮಾಡಲು ದಿನಾಂಕ 30.5.2005 ರಂದು ಆಡಳಿತ ಮಂಡಳಿಯಲ್ಲಿ ನಿರ್ಣಯ ಮಾಡಿದ್ದೆವು. ಸದರಿ ನಿರ್ಣಯದಲ್ಲಿ ನಾನು ಹಾಜರಿದ್ದು ಸಭಾ ನಡವಳಿಕೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ದಿನಾಂಕ 30.5.2015 ರ ಸಭಾ ನಡವಳಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಠರಾವು ಪುಸ್ತಕವನ್ನು ಸಿ.ಸಿ ನಂ.346/2014 ರಲ್ಲಿ ನಿಪಿ3 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ನಡಾವಳಿಯನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಅದೇ ರೀತಿ 2006-07 ನೇ ಸಾಲಿನಲ್ಲಿ ದಾಸ್ತಾನು ಮಾಡಿದ್ದ ಮರದ ಪಾಚಿ, ಗೊಂದು ಮತ್ತು ಜೇನನ್ನು ಮಾರಾಟ ಮಾಡಲು ದಿನಾಂಕ 7.9.2006 ರಂದು ಆಡಳಿತ ಮಂಡಳಿಯಲ್ಲಿ

ನಿರ್ಣಯ ಮಾಡಿದ್ದೆವು. ಸದರಿ ನಿರ್ಣಯದಲ್ಲಿ ನಾನು ಹಾಜರಿದ್ದು ಸಭಾ ನಡವಳಿಕೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ದಿನಾಂಕ 7.9.2006 ರ ಸಭಾ ನಡವಳಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಠರಾವು ಪುಸ್ತಕವನ್ನು ಸಿ.ಸಿ ನಂ.346/2014 ರಲ್ಲಿ ನಿಪಿ3 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ನಡಾವಳಿಯನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ನಂತರ ನಮ್ಮ ಸಂಘದ ಲೆಕ್ಕಪರಿಶೋಧನೆ ಮಾಡಿಸಿದಾಗ ಆರೋಪಿತರು ಆಡಳಿತ ಮಂಡಳಿಯಲ್ಲಿ ನಿರ್ಣಯಿಸಿದಕ್ಕಿಂತ ಕಡಿಮೆ ಬೆಲೆಗೆ ಮರದ ಪಾಚಿ ಮತ್ತು ಜೇನನ್ನು ಮಾರಾಟ ಮಾಡಿ 2005-06 ನೇ ಸಾಲಿನಲ್ಲಿ 9,22,000/- ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, ಅದೇ ರೀತಿ 2006-07 ರಲ್ಲಿ 1,62,000/- ಹಣವನ್ನು ದುರುಪಯೋಗಪಡಿಸಿಕೊಂಡಿರುವ ವಿಚಾರ ಗೊತ್ತಾಗಿರುತ್ತದೆ. ಮೇಲೆ ಹೇಳಿದ ವಿಚಾರವಾಗಿ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಸದರಿ ಸಂಘದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಯದರ್ಶಿಗಳಾಗಿರುತ್ತಾರೆ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎ.ಟಿ.ಕೆ ವಕೀಲರಿಂದಃ</u>**

ನಾನು ಈಗ ಸದರಿ ಸೊಸೈಟಿಯ ನಿರ್ದೇಶಕನಾಗಿರುವುದಿಲ್ಲ. ಆದರೆ ಸದಸ್ಯನಾಗಿರುತ್ತೇನೆ. ಈಗಲೂ ನಾನು ಸದರಿ ಸೊಸೈಟಿಗೆ ಹೋಗಿ ಬರುತ್ತೇನೆ. ಈ ಕೇಸು ದಾಖಲಿಸಿದ ನಂತರ 2014 ರಲ್ಲಿ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡುವಾಗ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ಹಣ ದುರುಪಯೋಗವಾಗಿರುತ್ತದೆ ಎಂದು ಹೇಳಿರುತ್ತೇನೆ. ನನಗೆ ಆಡಿಟ್ ವರದಿ ಮತ್ತು ಇಲಾಖಾ ವಿಚಾರಣೆ ವರದಿಯನ್ನು ನೋಡಿದಾಗ ಹಣ ದುರುಪಯೋಗದ ಬಗ್ಗೆ ಗೊತ್ತಾಗಿರುತ್ತದೆ. ಯಾವ ದಿನಾಂಕದಂದು ಎಷ್ಟು ಹಣ ದುರುಪಯೋಗವಾಗಿರುತ್ತದೆ ಎಂದು ಈಗ ಹೇಳಲು ಸಾಧ್ಯವಿಲ್ಲ. ನಿಪಿ2 ರಂತೆ ನಿರ್ಣಯ ಮಾಡಿದಾಗ 15 ದಿನಗಳ ಹಿಂದೆ ಮೀಟಿಂಗ್ ನಡೆಸುವ ಬಗ್ಗೆ ನೋಟಿಸನ್ನು ನೀಡಿದ್ದು ನಿಖರವಾದ ದಿನಾಂಕ ನೆನಪಿರುವುದಿಲ್ಲ. ನೋಟಿಸನ್ನು ಕಾರ್ಯದರ್ಶಿಯವರು ನೀಡಿರುತ್ತಾರೆ. ನಿಪಿ2 ರಂತೆ ನಿರ್ಣಯ ಮಾಡಿದಾಗ 9 ಜನ ನಿರ್ದೇಶಕರಿದ್ದರು. 9 ಜನ ನಿರ್ದೇಶರು ಸಹಿ ಮಾಡಿರುತ್ತಾರೆ. ನಿಪಿ2 ರಲ್ಲಿ 5 ಜನ ಹೊರತುಪಡಿಸಿ ಬೇರೆ ನಿರ್ದೇಶಕರು ಸಹಿ ಮಾಡಿರುವುದಿಲ್ಲ, ಉಳಿದವರು ಗೈರುಹಾಜರಾಗಿದ್ದರು ಎಂದರೆ ಸಾಕ್ಷಿದಾರರು ಮೀಟಿಂಗ್ ಮಾಡಲು ಕೋರಂ ಇತ್ತು ಎನ್ನುವರು. ನಮ್ಮ ಸೊಸೈಟಿಯಲ್ಲಿ ಸಂಗ್ರಹ ಮಾಡಿದ್ದೇವೆ ಎಂದು ಹೇಳುವ ಜೇನು, ಪಾಚಿ ಮತ್ತು ಗೊಂದು ದಿನಗಳೆದಂತೆ ತೂಕ ಕಡಿಮೆಯಾಗುತ್ತದೆ ಎಂದರೆ ಸಾಕ್ಷಿದಾರರು ಪಾಚಿ ಶೇಕಡ 2 ರಷ್ಟು ತೂಕ ಕಡಿಮೆಯಾಗಬಹುದು ಎನ್ನುವರು. ಜೇನು ಮತ್ತು ಗೊಂದನ್ನು ತುಂಬಾ ದಿನ ಸಂಗ್ರಹಿಸಿಟ್ಟರೆ ಹಾಳಾಗುತ್ತದೆ ಎಂದರೆ ಸರಿಯಲ್ಲ. ಜೇನು, ಪಾಚಿ ಮತ್ತು ಗೋಂದನ್ನು ತುಂಬಾ ದಿನ ಸಂಗ್ರಹಿಸಿಟ್ಟಾಗ ಅದು ಹಾಳಾಗುವ ಸಾಧ್ಯತೆ ಇದ್ದಾಗ ಅಥವಾ ಅದು ಮಾರಾಟವಾಗದೇ ಇದ್ದಾಗ ಅದನ್ನು

ಕಡಿಮೆ ಬೆಲೆಗೆ ಮಾರಾಟ ಮಾಡಲು ನಮ್ಮ ಸಂಘದಲ್ಲಿ ಕೆಲವೊಮ್ಮೆ ನಿರ್ಣಯ ಮಾಡಲಾಗಿರುತ್ತದೆ ಎಂದರೆ ಸಾಕ್ಷಿದಾರರು ನಾನು ನಿರ್ದೇಶಕನಾಗಿದ್ದಾಗ ಆ ರೀತಿ ನಿರ್ಣಯ ಮಾಡಿರುವುದಿಲ್ಲ ಎನ್ನುವರು. ಪಾಚಿಯನ್ನು ತುಂಬಾ ದಿನ ಸಂಗ್ರಹಿಸಿಟ್ಟರೆ ಅದು ಪುಡಿಯಾಗಿ ಬೂದಿಯಾಗುತ್ತದೆ ಎಂದರೆ ಸರಿ. ಸದರಿ ಜೇನು, ಪಾಚಿ ಮತ್ತು ಗೊಂದನ್ನು ಮಾರಾಟ ಮಾಡಲು ಟೆಂಡರ್ ಕರೆದು ಹೆಚ್ಚಿನ ಬಿಡ್‌ದಾರರಿಗೆ ಮಾರಾಟ ಮಾಡಲು ಪುನಃ ನಿರ್ಣಯವನ್ನು ಮಾಡುತ್ತೇವೆ ಎಂದರೆ ಸರಿ. ಹೆಚ್ಚಿನ ಬಿಡ್‌ದಾರರಿಗೆ ಹೊರತುಪಡಿಸಿ ಬೇರೆ ಯಾರಿಗೂ ಸದರಿ ವಸ್ತುಗಳನ್ನು ಮಾರಾಟ ಮಾಡುವಂತಿಲ್ಲ ಎಂದರೆ ಸರಿ. ನಾನು ನಿರ್ದೇಶಕನಾಗಿದ್ದಾಗ ಹೆಚ್ಚಿನ ಬಿಡ್‌ದಾರರನ್ನು ಹೊರತುಪಡಿಸಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿತರು ಕಡಿಮೆ ಬೆಲೆಗೆ ಜೇನು, ಗೊಂದು, ಪಾಚಿಯನ್ನು ಮಾರಾಟ ಮಾಡಿ ಹಣ ದುರುಪಯೋಗಪಡಿಸಿಕೊಂಡಿರುವುದು ಸುಳ್ಳು, ನಾನು ಮತ್ತು ನಮ್ಮ ಸಂಘದವರು ಸೇರಿ ಸುಳ್ಳು ಕೇಸನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸದರಿ ಸಂಘದ ನಿರ್ದೇಶಕನಾಗಿದ್ದರಿಂದ ಹಾಗೂ ಈಗ ಸದಸ್ಯನಾಗಿರುವುದರಿಂದ ಸಂಘಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ</u>**

ನಿಪಿ2 ಮತ್ತು 3 ನಡಾವಳಿಯನ್ನು ಸಂಘದ ಕಾರ್ಯದರ್ಶಿಯವರು ಬರೆಯುತ್ತಾರೆ. ನಡಾವಳಿಯನ್ನು ಬರೆದ ನಂತರ ಕಾರ್ಯದರ್ಶಿಯವರು ಸಹಿ ಮಾಡುತ್ತಾರೆ. ನಿಪಿ2 ಮತ್ತು 3 ರಲ್ಲಿ ಕಾರ್ಯದರ್ಶಿಯವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಕಾರ್ಯದರ್ಶಿ ಸಹಿ ಮಾಡಿರುವುದಿಲ್ಲ ಎನ್ನುವರು. 2005-06 ಮತ್ತು 2006-07 ನೇ ಸಾಲಿನ ಆಡಿಟ್ ವರದಿಯು ಸೊಸೈಟಿಗೆ 2013-14 ರಲ್ಲಿ ಬಂದಿರುತ್ತದೆ. ಸದರಿ ಸಮಯದಲ್ಲಿ ನಾನು ನಿರ್ದೇಶಕನಾಗಿರಲಿಲ್ಲ. ಆಡಿಟ್ ವರದಿಯನ್ನು ಅನುಮೋದಿಸಬೇಕಾದರೆ ಅದನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮತಿ ಪಡೆಯಬೇಕು ಎಂದರೆ ಸರಿ. ಸದರಿ ಆಡಿಟ್ ವರದಿಯನ್ನು ಯಾವ ವರ್ಷದ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮತಿ ಪಡೆಯಲಾಗಿರುತ್ತದೆ ಎಂದರೆ ಸಾಕ್ಷಿದಾರರು 2012 ರಲ್ಲಿ ಅನುಮತಿ ಪಡೆಯಲಾಗಿರುತ್ತದೆ ಎನ್ನುವರು. 2005-06 ಮತ್ತು 2006-07 ನೇ ಸಾಲಿನಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಆಡಿಟ್ ವರದಿಯಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹಣ ದುರುಪಯೋಗವಾಗಿರುವ ನಮೂದಾಗಿಲ್ಲದಿದ್ದರೂ ಸಹ ಮೇಲಾಧಿಕಾರಿಯು ಸಲ್ಲಿಸಿರುವ ದೂರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ